ಸುಂದರ ನೃತ್ಯರೂಪ 'ಮಂಜರಿ'

ಡಾ.ರಮಾ ವಿ ಬೆಣ್ಣೂರ್

ನಾದ ಲೋಕ

ಗಾನಭಾರತೀಯು ತನ್ನ ವಿಶಿಷ್ಟ ಪ್ರಯೋಗಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡಿರುವುದು ಮೈಸೂರಿನ ಕಲಾರಸಿಕ ವೃಂದಕ್ಕೆ ಪರಿಚಿತ ವಾದುದೇ. ಅದಕ್ಕೆ ಮತ್ತೊಂದು ಸೇರ್ಪಡೆ ಎಂದರೆ ಈಚೆಗೆ ವೀಣೆ ಶೇಷಣ್ಣ ಭವನದಲ್ಲಿ ನಡೆದ 'ಮಂಜರಿ' ದಿ ಮಿಸ್ಟಿಕ್ ಫ್ರಾಗ್ರೆನ್ಸ್ ಎಂಬ ನೃತ್ಯ ಪ್ರಯೋಗ.

ಬೆಂಗಳೂರಿನ ಯುವ ಭರತನಾಟ್ಯ ಕಲಾವಿದೆ ವಿದುಷಿ ದಿವ್ಯಾ ರವಿ ಅವರ ವಿನೂತನ ಕಲ್ಪನೆಯ ಕೂಸೇ 'ಮಂಜರಿ'. ನೃತ್ಯ ದಂಪತಿಗಳಾದ ಕಿರಣ್ ಮತ್ತು ಸಂಧ್ಯಾ ಅವರ ಶಿಷ್ಯೆಯಾದ ದಿವ್ಯಾ ಅವರು, ಈಗ ವಿದುಷಿ ಸೌಂದರ್ಯ ಶ್ರೀವತ್ಸ ಅವರಲ್ಲಿ ತಮ್ಮ ಕಲಿಕೆಯನ್ನು ಮುಂದುವರೆಸುತ್ತಿದ್ದಾರೆ.

ತಮ್ಮ ಪತಿಯೊಡಗೂಡಿ ಈ ವಿನೂತನ ಏಕವ್ಯಕ್ತಿ ಪ್ರದರ್ಶನವನ್ನು ಹುಟ್ಟುಹಾಕಿರುವ ಅವರು ಇದರಲ್ಲಿ ಮನುಷ್ಯನ ಬದುಕಿನ ಅವಿಭಾಜ್ಯ ಅಂಗವಾದ ಹೂಗಳ ಬಗ್ಗೆ ಸಾಮಾನ್ಯವಾಗಿ ಗಮನಿಸದೇ ಹೋಗುವ ಅನೇಕ ಸಂಗತಿಗಳನ್ನು ಅನಾವರಣಗೊಳಿಸಿದ್ದಾರೆ. ಹೂವುಗಳಿಗೆ ಇರುವ ಬಣ್ಣ, ಸುಗಂಧದ ಜೊತೆಗೆ ಅವುಗಳ ಪೌರಾಣಿಕ ಉಲ್ಲೇಖ, ಆಧ್ಯಾತ್ಮಿಕ ಪರಿಮಳ ಮತ್ತು ಅಲೌಕಿಕ ಕಥನಗಳನ್ನು ಹೆಕ್ಕಿ ತೆಗೆದು ಒಂದು ಸುಂದರ ನೃತ್ಯರೂಪಕ್ಕೆ ಮಾರ್ಗ ಶೈಲಿಯ ಚೌಕಟ್ಟಿನಲ್ಲಿಯೇ ಅಳವಡಿಸಿರುವುದು ಇದರ ವಿಶೇಷ.

ಅಲರಿಪು, ಕೃತಿ, ವರ್ಣ, ಜಾವಳಿ, ಪದ ಮತ್ತು ತಿಲ್ಲಾನದ ಹೊರಮೈಯನ್ನು ಹೊಂದಿದ್ದ ಈ ಎರಡು ಗಂಟೆಗಳ ನೃತ್ಯ ಕಾರ್ಯಕ್ರಮವು ನೋಡುಗರನ್ನು ಸಂಪೂರ್ಣವಾಗಿ ಹಿಡಿದಿಡುವಲ್ಲಿ ಯಶಸ್ವಿಯಾಯಿತು. ಪ್ರಾರಂಭದ ಅಲರಿಪುವು ಹೆಚ್ಚಾಗಿ ಮೊಗ್ಗನ್ನು ಸೂಚಿಸುವ ಹಸ್ತಮುದ್ರೆಯನ್ನೇ ಬಳಸಿದುದೂ ಅರ್ಥಪೂರ್ಣವಾದ ಪೀಠಿಕೆಯಾಗಿತ್ತು. ಮುಂದೆ ಅಶೋಕ ಪುಷ್ಪವು ಅವರ ಆಯ್ಕೆಯಾಗಿತ್ತು. ಅಹಂಕಾರಿ ತಶೋಕನು ಮುನಿಯ ಶಾಪದಿಂದ 'ಅಶೋಕ' (ಶೋಕವಿಲ್ಲದ) ವೃಕ್ಷವಾಗಿ ಪರಿವರ್ತಿತವಾಗುವ ಕಥೆಯನ್ನು ಅವರು ಸಂಚಾರಿಯಲ್ಲಿ ನಿರೂಪಿಸಿದರು. ಕಾಳಿದಾಸನ 'ಮಾಳವಿಕಾಗ್ನಿಮಿತ್ರ'ದಲ್ಲಿ ಬರುವ 'ಹೆಂಗಳೆಯರ ಕಾಲಿನ ತಾಡನದಿಂದ ಹೂ ತಳೆಯಿ', ರಾಮಾಯಣದ ಸೀತಾಮಾತೆಯು ಲಂಕೆಯ ಅಶೋಕವನದಲ್ಲಿ ಸೆರೆಯಲ್ಲಿದ್ದ ಉಲ್ಲೇಖವೂ ಪ್ರಸ್ತಾಪಗೊಂಡಿತು.

ಪಂಚಭೂತಗಳಿಂದ ತನ್ನ ಚೈತನ್ಯವನ್ನು ಪಡೆಯುವ ಕಮಲವು ಮುಂದಿನ ನೃತ್ಯಬಂಧದ ವಸ್ತು. ಬ್ರಹ್ಮನು ಚಿನ್ನದ ಕಮಲದಿಂದ ತನ್ನ ಕಾರ್ಯ ಆರಂಭಿಸಿದ ಎಂಬ ಸಂಗತಿಯಿಂದ ಹಿಡಿದು ದೇಹದಲ್ಲಿರುವ ಸಪ್ತ ಚಕ್ರಗಳು ವಿವಿಧ ದಳಗಳ ತಾವರೆಯಿಂದ ನಿರ್ದೇಶಿಸಲ್ಪಡುತ್ತದೆ ಎಂಬುವವರೆಗೆ ಇದರ ಹರಹು ಇದ್ದಿತು. ಬಿಗಿಯಾದ ಅಡವುಗಳು ಮಧ್ಯದಲ್ಲಿದ್ದು, ಇದಕ್ಕೆ ವರ್ಣದ ರೂಪವನ್ನು ನೀಡಿದವು. ಶೃಂಗಾರ ವಸ್ತುವಿನ ಜಾವಳಿಗೆ ಅವರ ಆಯ್ಕೆ ಪಾರಿಜಾತವಾಗಿತ್ತು. ಸಹಜವಾಗಿಯೇ ಸತ್ಯಭಾಮೆಯ ಮುನಿಸು, ಅಸೂಯೆ, ನಿರಾಶೆ ಎಲ್ಲದರ ಅಭಿವ್ಯಕ್ತಿಗೂ ವಿಫುಲ ಅವಕಾಶವಿದ್ದ ವಸ್ತು. ಶ್ರೀಕೃಷ್ಣನು ರುಕ್ಮಿಣಿಗೆ ನೀಡಿದ ಪಾರಿಜಾತದ ಸುದ್ದಿಯು ಸತ್ಯಭಾಮೆಯನ್ನು ಸಿಟ್ಟಿಗೆಬ್ಬಿಸಿರುತ್ತದೆ. ಅವಳ ಎಲ್ಲ ಭಾವಾಭಿನಯವು ದಿವ್ಯಾ ಅವರ ಮೊಗದಲ್ಲಿ ಸುಂದರವಾಗಿ ಮೂಡಿಬಂದಿತು.

ಶಿವನಿಂದ ಶಾಪಗ್ರಸ್ಥವಾಗಿ ಅವನ ಪೂಜೆಗೆ ಸಲ್ಲದಿರುವ ಕೇತಕಿಯ ಕಥಾ ಭಾಗವು ಪದದ ರೂಪದಲ್ಲಿ ಅನಾವರಣಗೊಂಡಿತು. ತನ್ನ ಸುವಾಸನೆಯಿಂದ ತಾನೇ ಮತ್ತೇರಿದವಳಂತೆ ವರ್ತಿಸುವ ಕೇತಕಿಯಲ್ಲದೆ ಜ್ಯೋತಿರ್ಲಿಂಗದ ಅಶರೀರವಾಣಿಯ ಸೂಚನೆಯಂತೆ ಶಿವನ ಆದಿ-ಅಂತ್ಯವನ್ನು ಅರಸುವ ವಿಷ್ಣು ಮತ್ತು ಬ್ರಹ್ಮರ ಕಥೆಯನ್ನು ಒಳಗೊಂಡಿತ್ತು. ಬ್ರಹ್ಮನೊಡಗೂಡಿ ಅನೃತವನ್ನಾಡುವ ಕೇತಕಿಗೆ ಎಂದೆಂದೂ ತನ್ನ ಪೂಜೆಗೆ ಅನರ್ಹವಾಗುವ ಶಾಪವನ್ನು ಶಿವನು ನೀಡುತ್ತಾನೆ.

ಇದನ್ನು ಸೊಗಸಾದ ಸಂಚಾರಿಯಲ್ಲಿ ದಿವ್ಯಾ ಅವರು ತೋರಿದರು. ಹೂಗಳು ಮನುಕುಲದ ವಿಲಾಸವಷ್ಟೇ ಅಲ್ಲ, ವಿಕಾಸಕ್ಕೂ ಪ್ರೇರಣವಾಗಿ, ಆತ್ಮೋಜ್ವಲಕ್ಕೆ ಕಾರಣವಾಗಿರುತ್ತವೆ ಎಂಬುದನ್ನು ಅವರ ಕೊನೆಯ ತಿಲ್ಲಾನ ರೂಪದ ನೃತ್ಯಬಂಧವು ತೋರಿತ್ತು. ಪೂಜೆಗೆ, ಗೌರವ ತೋರಲು, ಸಂತಸವನ್ನು ವ್ಯಕ್ತಪಡಿಸಲು, ಶರಣಾಗತಿ ತೋರಲೂ ಕುಸುಮಗಳು ಬಳಕೆಯಾಗುತ್ತವೆ ಎಂಬುದಷ್ಟೇ ಅಲ್ಲದೆ ಅವು ಹೇಗೆ ತಮ್ಮ ವಂಶೋದ್ಧಾರ ಕಾರ್ಯಕ್ಕೂ ಕಾರಣವಾಗುತ್ತವೆ ಎಂಬುದನ್ನು ದಿವ್ಯಾ ಅವರು ನಿರೂಪಿಸಿದರು.

ಸಪೂರ ಅಂಗ ಸೌಷ್ಠವ, ಸುಂದರ ಅಭಿನಯ, ಕುಂದಿಲ್ಲದ ಪಾದಗತಿಗಳೊಡನೆ ಸೊಗಸಾದ ಶ್ರೀವತ್ಸ ಅವರ ಕಂಠಸಿರಿಯು ಈ ಪ್ರಯೋಗದ ಆಕರ್ಷಣೆಯಾಗಿತ್ತು.

ವಿವಾಹ-ಸಂಸ್ಕಾರದ ಪರಿಚಯ

ತಾರೋಡಿ ಸುರೇಶ

ಷೋಡಶ ಸಂಸ್ಕಾರಗಳಲ್ಲಿ ವಿವಾಹ ಸಂಸ್ಕಾರವು ಎಲ್ಲರಿಗೂ ಸುಪರಿಚಿತ. ಅತ್ಯಂತ ವೈಭವದಿಂದ ನಡೆಯುತ್ತದೆ ಕೂಡ. ಭಾರತದಲ್ಲಿ ಮಾತ್ರವೇ ಇದನ್ನು ಸಂಸ್ಕಾರವೆಂದು ಕರೆಯುವುದು. ಮಹರ್ಷಿಗಳು ಭಾರತದಲ್ಲಿ ವಿವಾಹ ಪದ್ಧತಿಯನ್ನು ವಿಶೇಷವಾದ ರೀತಿಯಲ್ಲಿ ಅಳವಡಿಸಿಕೊಟ್ಟಿದ್ದಾರೆ. ತನ್ನ ಮೌಲಿಕವಾದ ಸತ್ವದಿಂದ ಇಂದು ಜಾರಿದ್ದರೂ ಅದರ ಅನೇಕ ಅವಶೇಷಗಳನ್ನು ನಮ್ಮ ದೇಶದ ವಿವಾಹದ ಆಚರಣೆಯಲ್ಲಿ ಇಂದಿಗೂ ನೋಡಬಹುದು.

ಕೊಳೆಯನ್ನು ತೊಳೆದು ಹೊಳೆಯುವಂತೆ ಮಾಡಿ ಮೌಲಿಕ ರೂಪಕ್ಕೆ ತರುವುದೇ ಸಂಸ್ಕಾರ. ದೇಹವನ್ನು ಸ್ನಾನದಿಂದ ಶುದ್ಧವಾಗಿಟ್ಟುಕೊಳ್ಳುತ್ತೇವೆ. ಹಾಗೆಯೇ ಅಂತಃಕರಣಗಳಾದ ಮನೋಬುದ್ಧಿಯನ್ನು ಶುದ್ಧಗೊಳಿಸುವ ಕರ್ಮಗಳನ್ನು ಸಂಸ್ಕಾರವೆಂದು ಕರೆಯಲಾಗಿದೆ. ಅಂತಹ ಸಂಸ್ಕಾರವನ್ನು ಕೊಟ್ಟು ಶುದ್ಧಿಯನ್ನು ತಂದುಕೊಂಡಾಗ ಅವು ಪರಮಾತ್ಮ ದರ್ಶನವನ್ನು ಮಾಡಿಸುತ್ತವೆ. ಈ ವಿವಾಹವೂ ಅಂತಹ ಒಂದು ಸಂಸ್ಕಾರವಾಗಿದೆ.

ವಿವಾಹವನ್ನು ಎಂಟು ಬಗೆಯಲ್ಲಿ ವರ್ಗೀಕರಿಸಿದ್ದಾರೆ. ಭಗವಂತನ ಆಶಯವನ್ನು ಅರಿತು ಅದಕ್ಕನುಗುಣವಾಗಿ ನಡೆಸುವ ವಿವಾಹಕ್ಕೆ ಬ್ರಾಹ್ಮವಿವಾಹವೆಂದು ಹೆಸರು. ಸಾಮಾನ್ಯವಾಗಿ ನಮ್ಮ ದೇಶದಲ್ಲಿ ಬ್ರಾಹ್ಮವಿವಾಹವೇ ನಡೆಯುವಂತಹದ್ದು. ದೈವ, ಪ್ರಾಜಾಪತ್ಯಾ ಆರ್ಷ, ಆಸುರ, ಗಾಂಧರ್ವ, ರಾಕ್ಷಸ ಮತ್ತು ಪೈಶಾಚ ಎಂದು ಅನ್ಯ ಏಳು ವಿವಾಹಗಳೂ ಉಂಟು.

ಉದ್ವಾಹ, ಪರಿಣಯ, ಉಪಯಮ, ಪಾಣಿಗ್ರಹಣ ಇತ್ಯಾದಿ ವಿವಾಹಕ್ಕೆ ನಮ್ಮ ದೇಶದಲ್ಲಿ ಬಳಸುವ ಅನ್ಯ ಮಂಗಳ ಹೆಸರುಗಳು. ಅನ್ಯದೇಶಗಳಲ್ಲಿ ಕೇವಲ ಇಂದ್ರಿಯ ಸುಖಕ್ಕಾಗಿ ವಿವಾಹವೆಂಬ ವ್ಯವಹಾರವಿದೆ. ಆದರೆ ಮಹರ್ಷಿಗಳು ತಮ್ಮ ಭಾವವನ್ನು ವ್ಯಕ್ತಪಡಿಸಲು ಬಹಳ ಯೋಗ್ಯವಾದ ಪದಗಳನ್ನು ಬಳಸಿದ್ದಾರೆ. ಅವು ಇಂದ್ರಿಯಸುಖದ ಜೊತೆಯಲ್ಲಿ ಬದಕನ್ನು ಪರಮಾರ್ಥದಲ್ಲಿ ನಿಲ್ಲಿಸುವ ಅತೀಂದ್ರಿಯ ಸುಖವೆರಡನ್ನೂ ಒಳಗೊಳ್ಳುತ್ತದೆ.

ಪರಬ್ರಹ್ಮದ ಸಂಕಲ್ಪಕ್ಕೆ ಅನುಗುಣವಾಗಿ ನಡೆಯುವಂತಹದ್ದಾದ್ದರಿಂದ ಬ್ರಾಹ್ಮವಿವಾಹ ಎನ್ನಿಸಿದೆ. ಎಂಟು ವಿವಾಹಗಳಲ್ಲಿ ಇದು ಅತ್ಯಂತ ಶ್ರೇಷ್ಠವಾದುದು. ಇದು ಬ್ರಹ್ಮಪ್ರಾಪ್ತಿಯನ್ನೇ ಜೀವನದ ಮಹಾಧ್ಯೇಯವಾಗಿ ಹೊಂದಿದೆ. ಉಳಿದ ವಿವಾಹಗಳು ಎಲ್ಲಕ್ಕೂ ಮೂಲನಾಗಿರುವ ಬ್ರಹ್ಮವನ್ನು ಬಿಟ್ಟು ಮಧ್ಯದಲ್ಲಿ ಪ್ರಾರಂಭವಾಗುತ್ತವೆ. ಒಂದು ಗಿಡವನ್ನು ಬೆಳೆಸಲು ಕೆಲವರು ಎಲೆಗಳಿಗೆ ನೀರೆರದರೆ ಇನ್ನು ಕೆಲವರು ಕಾಂಡಕ್ಕೆ ಹಾಕುತ್ತಾರೆ. ಆದರೆ ಬೇರಿಗೆ ನೀರು ಹಾಕಿದಾಗ ತಾನೇ ವೃಕ್ಷ ಬೆಳೆಯುತ್ತದೆ. ಹಾಗೆ ಜೀವನದ ಮೂಲದಲ್ಲಿ ಬೆಳಗುತ್ತಿರುವ ಪರಬ್ರಹ್ಮ ರೂಪವಾದ ಬೇರನ್ನು ಸೇರುವಂತೆ ನಡೆಸುವ ವಿಧಾನವನ್ನೊಳಗೊಂಡಿದ್ದರಿಂದ ಬ್ರಾಹ್ಮವಿವಾಹವು ಶ್ರೇಷ್ಠವಾದದ್ದು. ಜೊತೆಗೆ ಧರ್ಮಾರ್ಥ ಕಾಮಮೋಕ್ಷ ಎಂಬ ನಾಲ್ಕು ಪುರುಷಾರ್ಥಗಳನ್ನೂ ಇದು ಕೂಡಿಸಿಕೊಡುತ್ತದೆ.

ವಿಶೇಷವಾದ ಮನೋಧರ್ಮದಿಂದ ಒಯ್ಯುವಿಕೆ, ವಿಶೇಷವಾದ ಸಂಕಲ್ಪದಿಂದ ಒಯ್ಯುವಿಕೆಗೆ ವಿವಾಹವೆಂಬ ಹೆಸರು. "ನಾವು ಒಟ್ಟಿಗೆ ಸೇರೋಣ, ಸತ್ಸಂಕಲ್ಪ ಮಾಡೋಣ, ಒಳ್ಳೆಯ ಪ್ರೇಮದಿಂದ ಕೂಡಿರೋಣ, ಬೆಳಗೋಣ, ಸುಮನಸ್ಕರಾಗೋಣ ಎಂಬುದು ವಧುವರರ ನಡುವೆ ಆಗುವ ಒಪ್ಪಂದ. ಅದಕ್ಕೋಸ್ಕರ ವರನು ವಧುವನ್ನು ತನ್ನ ಮನೆಗೆ ಕರೆದೊಯ್ಯುತ್ತಾನೆ.

ಭಗವಂತನ ಆಶಯವನ್ನು ವಿಸ್ತಾರಗೊಳಿಸುತ್ತಾ ಪುನಃ ಭಗವಂತನನ್ನೇ ಸೇರುವ ಸಂಕಲ್ಪದಿಂದ ಭಗವಂತನನ್ನು ಪ್ರತಿನಿಧಿಸುವ ಅಗ್ನಿಯನ್ನು ಪ್ರದಕ್ಷಿಣೆ ಬರುವುದು ಪರಿಣಯ ಎನ್ನಿಸಿಕೊಳ್ಳುತ್ತದೆ.

ಪಾಣಿಗ್ರಹಣವೆಂದರೆ ಕೈಯಲ್ಲಿ ಹಿಡಿದುಕೊಳ್ಳುವಿಕೆ. ಮೇಲ್ಮುಖವಾಗಿ ಮಾಡಿಕೊಂಡಿರುವ ವಧುವಿನ ಹಸ್ತವನ್ನು ತನ್ನ ಹಸ್ತದಿಂದ, ಇಬ್ಬರ ಅಂಗುಷ್ಟವೂ ಮೇಲೆ ಬರುವಂತೆ ಹಿಡಿದುಕೊಳ್ಳುವುದು. "ಊರ್ಧ್ವಂ ಗಚ್ಛಂತಿ ಸತ್ವಸ್ಥಾಃ" ಎಂಬಂತೆ ನಮ್ಮ ಜೀವನವೆಲ್ಲ ಊರ್ಧ್ವಮುಖವಾಗಿರಲಿ ಎಂಬ ಸಂಕಲ್ಪವಿರುತ್ತದೆ. ಪಾಣಿಗ್ರಹಣ ಪ್ರಕ್ರಿಯೆಯಲ್ಲಿ ಪಂಚಭೂತಗಳನ್ನು ಪ್ರತಿನಿಧಿಸುವ ಐದು ಬೆರಳುಗಳ ಸೇರುವೆಯುಂಟಾಗಿ ಜೀವನದಲ್ಲಿ ಒಂದು ಐಕ್ಯವನ್ನು ಸಾಧಿಸಿಕೊಳ್ಳುವ ಭಾವವಿರುತ್ತದೆ.

(ಮುಂದುವರಿಯುತ್ತದೆ)

ಕ್ಯಾಂಪಸ್ ಕಲರವ

ಸಾಂದರ್ಭಿಕ ಚಿತ್ರ

ಮರದ ಕೆಳಗೆ ಪೆನ್‌ಡ್ರೈವ್ ಸಿಕ್ಕಾಗ...

ಕಿರಣ್ ಕುಮಾರ್ ಆರ್. ಸತ್ತೆಗಾಲ

ಸ್ನಾತಕೋತ್ತರ ಪ್ರಾಯೋಗಿಕ ತರಗತಿಯನ್ನು ಮುಗಿಸಿಕೊಂಡು ಮಧ್ಯಾಹ್ನದ ಬಿಸಿಲಿಗೆ ಬಾಡಿ ಬಸವಳಿದು ಎಷ್ಟು ಬೇಗನೆ ರೂಮಿಗೆ ಹೋಗಿ ಸೇರುವೆನೊ ಎಂಬ ಆತುರದಲ್ಲಿ ಹೋಗುತ್ತಿದ್ದಾಗ ಆಹಾರ ಮತ್ತು ಪೌಷ್ಟಿಕಾಂಶ ವಿಜ್ಞಾನ ವಿಭಾಗದ ಎದುರಿನ ಮರದ ಕೆಳಗೆ ಕೆಂಪು ಬಣ್ಣದ ಪೆನ್‌ಡ್ರೈವ್ ಕಂಡಿತು.

ಬಿಸಿಲಿನ ಬೇಗೆ ಮರೆಯಾಗಿ ಮೊಗದಲ್ಲಿ ಸಣ್ಣ ನಗುವೊಂದು ಅರಳಿತು. ಗೆಳೆಯ ಚಂದ್ರು 'ಹೊಡೀತಲ್ಲ ಜಾಕ್‌ಪಾಟ್ ಮಗ, 32 ಜಿಬಿಯ ಪೆನ್‌ಡ್ರೈವ್ ಸಿಕ್ಕಿತ್ತಲ್ಲ' ಮೊಬೈಲ್‌ಗೆ ಕನೆಕ್ಟ್ ಮಾಡಿ ಯಾರದ್ದಿರಬಹುದು ನೋಡೋಣ ಇರು ಎಂದಾಗ, ಅಲ್ಲಿದ್ದದ್ದು ಸಾಲು-ಸಾಲು ಮಾರ್ಕ್ಸ್ ಕಾರ್ಡುಗಳು, ಕುಟುಂಬದ ಜೊತೆಗಿನ ಫೋಟೊಗಳು ಮತ್ತು ಒಂದು ಪಾಸ್‌ಪೋರ್ಟ್ ಭಾವಚಿತ್ರ. ಹತ್ತು ರೂಪಾಯಿ ಸಿಕ್ಕಿದರೂ ಖುಷಿ ಪಡುತ್ತಿದ್ದ ನನಗೆ, ಯಾಕೋ ಆ ಪೆನ್‌ಡ್ರೈವ್ ಇಟ್ಟುಕೊಳ್ಳಲು ಮನಸ್ಸಾಗಲಿಲ್ಲ. ಅದು ಹುಡುಗಿಯ ಪೆನ್‌ಡ್ರೈವ್ ಆಗಿದ್ದ ಕಾರಣ ವಾಪಸ್ ಕೊಡಬೇಕೆಂದು ಮನಸ್ಸಾಯಿತು. ನಂಬರ್ ಕಲೆಕ್ಟ್ ಮಾಡಿ ಫೋನ್ ಮಾಡಿಯೇ ಬಿಟ್ಟೆ.

'ಆ ಕಡೆಯಿಂದ ಹಲೋ... ಯಾರು?' ಎನ್ನುವ ಧ್ವನಿ ಕಿವಿಗಪ್ಪಳಿಸಿ ನಡೆದ ಘಟನೆ ತಿಳಿಸಿದೆ. 'ಹತ್ತು ಗಂಟೆಗೆ ನಿಮ್ಮ ಡಿಪಾರ್ಟ್‌ಮೆಂಟ್ ಹತ್ತಿರ ನಿಂತಿರುವೆ, ಬಂದು ನಿಮ್ಮ ಪೆನ್‌ಡ್ರೈವ್ ತೆಗೆದುಕೊಂಡು ಹೋಗಿ ಎಂದು ಹೇಳಿ ಫೋನ್ ಕಟ್ ಮಾಡಿದಾಗ, ಇನ್ನು ಸ್ವಲ್ಪ ಹೊತ್ತು ಮಾತನಾಡಬಾರದಿತ್ತೇ' ಎಂದು ಹೃದಯ ನನ್ನ ಜೊತೆ ಮುನಿಸಿಕೊಂಡಿತ್ತು.

ಮುಂಜಾನೆ ಎದ್ದು ವ್ಯಾಯಾಮ ಮಾಡಿ, ಒಳ್ಳೆ ಟೀಶರ್ಟ್ ಧರಿಸಿ, ಕೈಯಲ್ಲಿ ಪೆನ್‌ಡ್ರೈವ್ ಹಿಡಿದು ಅತ್ತ-ಇತ್ತ ನೋಡುತ್ತ ನಿಂತಿದ್ದೆ. ಸ್ವಲ್ಪ ದೂರದಿಂದ ಕೈಯಲ್ಲಿ ಪುಸ್ತಕ ಹಿಡಿದು, ಹಣೆಗೆ ಸಿಂಧೂರವಿಟ್ಟು, ಲೂಸ್‌ಹೇರ್ ಬಿಟ್ಟುಕೊಂಡು, ಅಪ್ಪಟ ಕನ್ನಡತಿಯಂತೆ ಬಿಳಿ-ಗುಲಾಬಿ ಮಿಶ್ರಿತ ಚೂಡಿದಾರ್ ಧರಿಸಿದ್ದ ಹುಡುಗಿ ಹತ್ತಿರಕ್ಕೆ ಬಂದು, 'ಕಿರಣ್ ಅಂದ್ರೆ ನೀವೇನಾ', ಎಂದಾಗ ಎಚ್ಚರಗೊಂಡೆ. ಅಲ್ಲಿಯವರೆಗೆ ಅವಳನ್ನೇ ನೋಡುವತ್ತ ಮಗ್ನನಾಗಿಬಿಟ್ಟಿದ್ದೆ. ಹ್ಞಾ, 'ನಾನೇ ತಕೋಳಿ ನಿಮ್ಮ ಪೆನ್‌ಡ್ರೈವ್' ಎಂದೆ, 'ತುಂಬಾ ಥ್ಯಾಂಕ್ಸ್, ಇದನ್ನು ಕಳೆದುಕೊಂಡು ಬಹಳ ನೋವಾಗಿತ್ತು, ಇದರಲ್ಲಿ ತುಂಬ ನೆನಪುಗಳಿವೆ. ಮತ್ತೆ ನನ್ನ ಕೈ ಸೇರಿಸಿದ್ದಕ್ಕೆ ನಿಮಗೆ ಮತ್ತೊಮ್ಮೆ ಥ್ಯಾಕ್ಸ್' ಎಂದಳು.

ಹೀಗೆ... ಇಬ್ಬರ ನಡುವೆ ಪರಿಚಯವಾಗಿ, ಪರಿಚಯ ಗೆಳೆತನವಾಯಿತು. ಪ್ರತಿದಿನ ಕಾಲೇಜಿಗೆ ಹೋಗುವಾಗ ನಮ್ಮಿಬ್ಬರ ನಡುವೆ ಒಮ್ಮೆಯಾದರೂ ಪೆನ್‌ಡ್ರೈವ್ ವಿಷಯ ಪ್ರಸ್ತಾಪವಾಗುತ್ತಿತ್ತು.

ಸ್ನೇಹಿತೆಯ ನಿಜವಾದ ಹೆಸರೇ ಮರೆತುಹೋಗಿ ಪೆನ್‌ಡ್ರೈವ್ ಎಂದು ಕರೆದು-ಕರೆದು ಅದು ಅಡ್ಡಹೆಸರಾಗಿ ಹೋಗಿತ್ತು. ಆಕೆಯ ಸ್ನೇಹಿತೆಯರೂ ಆ ಹೆಸರನ್ನೇ ಕರೆಯಲು ಶುರುಮಾಡಿದ್ದರು. ಒಮ್ಮೆ ಟೀಚರ್, 'ಸಿಸ್ಟಮ್‌ನಲ್ಲಿ ನೋಟ್ಸ್ ಸೇವ್ ಮಾಡಿದ್ದೀನಿ ಪೆನ್‌ಡ್ರೈವ್‌ಗೆ ಹಾಕಿಕೊಂಡು ಜೆರಾಕ್ಸ್ ಮಾಡಿಸಿಕೊಳ್ಳಿ' ಎಂದಾಗ ಈಡೀ ತರಗತಿ ನಕ್ಕಿದ್ದು, ಅದರಿಂದ ಆ ಹೆಸರು ಟೀಚರ್‌ಗೂ ತಿಳಿದು ಪ್ರಸಿದ್ಧಿಯಾಗಿಬಿಟ್ಟಿದ್ದಳು ಆಕೆ.

ನಾನು ನಿನ್ನಿಂದ ಎಷ್ಟೇ ದೂರವಿದ್ದರೂ ಪೆನ್‌ಡ್ರೈವ್ ಎಂಬ ಶಬ್ದ ಕೇಳಿದರೆ ನನಗೆ ನೀನೆ ನೆನಪಾಗುತ್ತೀಯಾ, ನಿನ್ನ ನಗುಮುಖ ನನ್ನ ಕಣ್ಣಮುಂದೆ ಬರುತ್ತದೆ. ನಮ್ಮ ಕಾಲೇಜಿನ ಸುಂದರ ಸ್ಥಳಗಳಲ್ಲಿ, ನಮ್ಮ ಸ್ನೇಹ ಸರಪಳಿಯೊಳಗೆ ಕಳೆದ ಮಧುರ ನೆನಪುಗಳು ನನ್ನ ನೆನಪಲ್ಲಿ ಇನ್ನು ಹಚ್ಚಹಸಿರಾಗಿದೆ.

ಚಿಣ್ಣರ ಚಿತ್ರ





ಮೈಸೂರಿನ ಬೇಡನ್ ಪೋವೆಲ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿ ಪಿ.ಪ್ರಜ್ವಲ್ ಬಿಡಿಸಿದ ಚಿತ್ರ

ನೀವೂ ಕಳುಹಿಸಿ

'ಮೆಟ್ರೊ' ಕುಂದುಕೊರತೆ, ಕ್ಯಾಂಪಸ್ ಕಲರವ, ಲೇಖನ ಕಳುಹಿಸಲು...

ಇ ಮೇಲ್: mysoremetro@prajavani.co.in

ವಾಟ್ಸ್‌ಆ್ಯಪ್; 95133 22937

ಕುಂದು ಕೊರತೆ



ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಿ

ವಿ.ವಿ.ಮೊಹಲ್ಲಾದಲ್ಲಿರುವ ವಾಲ್ಮೀಕಿ ರಸ್ತೆಯು ಹಳ್ಳಗಳಿಂದ ಕೂಡಿದ್ದು, ದ್ವಿಚಕ್ರ ವಾಹನ ಸವಾರರಿಗೆ ತೊಂದರೆಯಾಗುತ್ತಿದೆ. ಅಲ್ಲದೇ, ಮಳೆ ಬಂದಾಗಲೆಲ್ಲ ರಸ್ತೆಯಲ್ಲಿ ನೀರು ನಿಂತು, ಸೊಳ್ಳೆಗಳ ತಾಣವಾಗಿ ಮಾರ್ಪಡುತ್ತದೆ. ಇದರಿಂದ ಜನರು ಸಾಂಕ್ರಾಮಿಕ ರೋಗ ಹರಡುವ ಭೀತಿಯಲ್ಲಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ರಸ್ತೆಯನ್ನು ದುರಸ್ತಿಗೊಳಿಸಲು ಕ್ರಮ ಕೈಗೊಳ್ಳಬೇಕು.

ಡಾ.ಟಿ.ರಘುನಾಥ್, ವಿ.ವಿ.ಮೊಹಲ್ಲಾ

ಫುಟ್‌ಪಾತ್ ಟೈಲ್ಸ್ ಸರಿಪಡಿಸಿ



ವಿ.ವಿ.ಮೊಹಲ್ಲಾದಲ್ಲಿರುವ ಎಸ್.ಬಿ.ಐ ಟೆಂಪಲ್ ರಸ್ತೆಯಲ್ಲಿರುವ ಫುಟ್‌ಪಾತ್ ಚಪ್ಪಡಿ ಕಲ್ಲುಗಳು ಕಿತ್ತು ಹೋಗಿದ್ದು, ಪಾದಚಾರಿಗಳಿಗೆ ಅಪಾಯ ಉಂಟು ಮಾಡುತ್ತಿದೆ.

ಸಾರ್ವಜನಿಕರು ಓಡಾಡುವುದರಿಂದ ಯಾವುದೇ ಸಂದರ್ಭದಲ್ಲಾದರೂ ಅಪಾಯವಾಗಬಹುದು. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಫುಟ್‌ಪಾತ್ ಟೈಲ್ಸ್‌ಗಳನ್ನು ಸರಿಪಡಿಸಬೇಕು.

ಡಾ.ಟಿ.ರಘುನಾಥ್, ವಿ.ವಿ.ಮೊಹಲ್ಲಾ



ರಸ್ತೆ ಸಂಚಾರಕ್ಕೆ ಅಡಚಣೆ

ಕುವೆಂಪು ನಗರದ ಕಾಮಾಕ್ಷಿ ಆಸ್ಪತ್ರೆ ಮುಂಭಾಗದ ರಸ್ತೆ ಕಿರಿದಾಗಿದ್ದು, ರಸ್ತೆಯ ಎರಡೂ ಬದಿಯಲ್ಲಿ ವಾಹನ ನಿಲ್ಲಿಸುವುದರಿಂದ ರಸ್ತೆ ಸಂಚಾರಕ್ಕೆ ಅಡಚಣೆ ಉಂಟಾಗಿದೆ.

ಭಾರಿ ವಾಹನಗಳು ರಸ್ತೆಯಲ್ಲಿ ಸಂಚರಿಸುವ ವೇಳೆ, ದ್ವಿಚಕ್ರ ವಾಹನ ಸವಾರರಿಗೆ ಅಪಘಾತ ಉಂಟಾಗುವ ಸಾಧ್ಯತೆಗಳು ಇವೆ. ಸಂಬಂಧಪಟ್ಟ ಅಧಿಕಾರಿಗಳು ರಸ್ತೆ ವಿಸ್ತರಣೆ ಮಾಡಿಸಬೇಕು ಅಥವಾ ವಾಹನ ನಿಲ್ಲಿಸಲು ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಬೇಕು.

ಅನಿಲ್ ಕುಮಾರ್ ನಾಡಿಗೇರ್, ರಾಮಕೃಷ್ಣನಗರ

ನಗೆಹನಿ

ನೈವೇದ್ಯಕ್ಕೆ ಮ್ಯಾಗಿ ಇಟ್ಟಿದ್ದಾರಂತೆ

ಈಶ್ವರ: ಪಾರ್ವತಿ ಪಾರ್ವತಿ

ಪಾರ್ವತಿ: ಏನ್ರಿ ನಿಮ್ದು, ಯಾಕ್ ಹಾಗೆ ಕೂಗ್ತೀರಿ

ಈಶ್ವರ: ಎಲ್ಲಿ ನನ್ನ ತ್ರಿಶೂಲ?

ಪಾರ್ವತಿ: ನನ್ಗೇನ್ ಗೊತ್ತು. ನಿಮ್ಮ ಮಗ ಗಣೇಶನನ್ನು ಕೇಳಿ. ನಾನ್ ಬೇಡ ಅಂದರೂ ತಗೊಂಡ್ ಹೋದ.

ಈಶ್ವರ: ಯಾಕಂತೆ?

ಪಾರ್ವತಿ: ಯಾರೋ ನೈವೇದ್ಯಕ್ಕೆ ಮ್ಯಾಗಿ ಇಟ್ಟಿದ್ದಾರಂತೆ ಅದಕ್ಕೆ.

ದರ್ಶನ್ ಜತೆ ನಟಿಸುವಾಸೆ

ಒಂದನೇ ಪುಟದಿಂದ

2018ರಲ್ಲಿ ನಡೆದ 'ಮಿಸ್ಟರ್ ಅಂಡ್ ಮಿಸ್ ಕರ್ನಾಟಕ' ಸ್ಪರ್ಧೆಯಲ್ಲಿ ಷೋಸ್ಟಾಪರ್ ಆಗಿ ಮಿಂಚಿದ್ದಾರೆ. 'ಮಿಸ್ಟರ್ ಅಂಡ್ ಮಿಸ್ ಡೆಕತ್ಲಾನ್ ಸ್ಪರ್ಧೆಯಲ್ಲಿ ಪಾಲ್ಗೊಂಡು ರನ್ನರ್ ಅಪ್ ಆಗಿದ್ದಾರೆ. ಕಳೆದ ವರ್ಷ ಹೈದರಾಬಾದ್‌ನಲ್ಲಿ ನಡೆದ ಬ್ಯೂಟಿ ಪೆಜೆಂಟ್‌ನಲ್ಲಿಯೂ ಕಾಣಿಸಿಕೊಂಡು ಹೆಸರು ಮಾಡಿದ್ದಾರೆ.

'ಫ್ಯಾಷನ್ ಡಿಸೈನಿಂಗ್ ಕೋರ್ಸ್ ಮಾಡುವ ಆಸೆಯೂ ಇದೆ. ಆದರೆ ಸಿನಿಮಾ ನನ್ನ ಮೊದಲ ಆದ್ಯತೆ. ಉತ್ತಮ ಸ್ಕ್ರಿಪ್ಟ್‌ಗಾಗಿ ಕಾಯುತ್ತಿದ್ದೇನೆ. ಸ್ಯಾಂಡಲ್‌ವುಡ್‌ನಲ್ಲಿ ರಾಧಿಕಾ ಪಂಡಿತ್ ನಟನೆ ಇಷ್ಟವಾಗುತ್ತದೆ. ಹೀರೊಗಳಲ್ಲಿ ದರ್ಶನ್ ಅವರೊಂದಿಗೆ ನಟಿಸಲು ತುಂಬಾ ಆಸೆಯಿದೆ. ನಟಿಯಾಗದಿದ್ದರೂ ತಂಗಿ, ಸ್ನೇಹಿತೆ ಪಾತ್ರವಾದರೂ ಅವರೊಟ್ಟಿಗೆ ತೆರೆ ಮೇಲೆ ಕಾಣಿಸಿಕೊಂಡರೆ ಸಾಕು' ಎಂದರು.

ದೇಹದ ಫಿಟ್‌ನೆಸ್‌ಗಾಗಿ ವರ್ಕೌಟ್: 5.7 ಅಡಿ ಎತ್ತರವಿರುವ ಸುಶ್ಮಿತಾ ಅವರು, ದೇಹದ ಫಿಟ್‌ನೆಸ್ ಕಾಯ್ದುಕೊಳ್ಳಲು ಜಿಮ್‌ನಲ್ಲಿ ದಿನಕ್ಕೆ ಎರಡೂವರೆ ಗಂಟೆ ಕಸರತ್ತು ಮಾಡುತ್ತಾರೆ. ಬೆಳಿಗ್ಗೆ ಹಾಗೂ ರಾತ್ರಿ ಚಪಾತಿ, ಪಲ್ಯ ತಿನ್ನುತ್ತಾರೆ. ಮಧ್ಯಾಹ್ನ ಮಾತ್ರ ರಾಗಿ ಮುದ್ದೆ ತರಕಾರಿ ಸಾರು ಬೇಕಂತೆ. ಜ್ಯೂಸ್ ಹಾಗೂ ಹಣ್ಣುಗಳನ್ನು ತಿನ್ನುವ ಮೂಲಕ ಸರಳ ಡಯೆಟ್ ಪಾಲಿಸುತ್ತಾರೆ.

ಸದ್ಯ ಮದುವೆ ಬೇಡ: 'ಇನ್ನೂ ಐದಾರು ವರ್ಷ ಮದುವೆ ಮಾಡಿಕೊಳ್ಳುವುದಿಲ್ಲ. ಚಂದನವನದಲ್ಲಿ ಹೆಸರಾಂತ ನಾಯಕಿಯಾಗುವ ಕನಸು ಕಾಣುತ್ತಿದ್ದೇನೆ. ಅದು ನನಸಾಗುವವರೆಗೂ ಪ್ರಯತ್ನ ಬಿಡುವುದಿಲ್ಲ, ಬೆಳ್ಳಿಪರದೆ ಮೇಲೆ ಮಿಂಚುತ್ತೇನೆ' ಎಂದು ಮುಗುಳ್ನಗುತ್ತಾರೆ ಸುಶ್ಮಿತಾ.